**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾ ಎ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

KARNATAKA SAMSKRIT UNIVERSITY

**कर्नाटक–संस्कृत–विश्वविद्यालय:**
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

---

ಕಸಂವಿ/01/ಜ್ಯೊ.ಸ.ಡಿ.ಬ/2013–14 ದಿನಾಂಕ : 07.01.2014

## ಅಧಿಸೂಚನೆ

**ವಿಷಯ : 2014–15ನೇ ಸಾಲಿಗೆ ಜ್ಯೋತಿಷ್ಯ ಶಾಸ್ತ್ರ ಬೋಧಿಸುತ್ತಿರುವ ಸಂಸ್ಥೆಗಳ ಸರ್ಟಿಫಿಕೇಟ್ ಹಾಗೂ ಡಿಪ್ಲೋಮಾ ಕೋರ್ಸ್‌ಗಳಿಗೆ ಮಾನ್ಯತೆ ನೀಡುವ ಬಗೆಗೆ**

**ಉಲ್ಲೇಖ : 1. ಉನ್ನತ ಶಿಕ್ಷಣ ಇಲಾಖೆ ಅನುಮೋದನೆ ಪತ್ರ ಸಂಖ್ಯೆ :ಇಡಿ.2.ಯುಡಿಎಸ್ 2013(ಭಾ), ದಿನಾಂಕ : 26.12.2013**

**2. ಮಾನ್ಯ ಕುಲಪತಿಗಳ ಒಪ್ಪಿಗೆ ಕಂಡಿಕೆ ಸಂಖ್ಯೆ : 10, 30.06.2012**

**3. 31.08.2012ರಂದು ನಡೆದ ಪ್ರಶಾಸನ ಸಮಿತಿ 6ನೇಸಭೆಯ ನಡಾವಳಿ**

**4. 30.06.2012ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 4ನೇ ಸಭೆಯ ನಡಾವಳಿ**

2014–15ನೇ ಸಾಲಿನ ಶೈಕ್ಷಣಿಕ ಅವಧಿಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಜ್ಯೋತಿಷ್ಯ ಶಾಸ್ತ್ರ ನಡೆಸುತ್ತಿರುವ ಸಂಸ್ಥೆಗಳಿಗೆ ಜ್ಯೋತಿಷ ಅಧ್ಯಯನ ಕೇಂದ್ರಗಳೆಂದು ಮಾನ್ಯತೆಯನ್ನು ನೀಡುವ ಸಂಬಂಧ ಅರ್ಹ ಸಂಸ್ಥೆಗಳಿಂದ ಆವೇದನ ಪತ್ರವನ್ನು ಆಹ್ವಾನಿಸಲಾಗಿದೆ. ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ **'ನಿರ್ದೇಶಕರು, ಅಧ್ಯಯನಾಂಗ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು–560018'** ಇವರ ಕಛೇರಿಯನ್ನು ಅಥವಾ ವಿಶ್ವವಿದ್ಯಾಲಯದ ಅಧಿಕೃತ ವೆಬ್‌ಸೈಟ್ www.ksu.ac.inಅನ್ನು ಸಂಪರ್ಕಿಸಿ ಮಾಹಿತಿಯನ್ನು ಪಡೆಯಬಹುದಾಗಿದೆ. ದಿನಾಂಕ 31.03.2014ರ ಒಳಗಾಗಿ ವಿವರಗಳೊಂದಿಗೆ ಆವೇದನ ಪತ್ರವನ್ನು ವಿಶ್ವವಿದ್ಯಾಲಕ್ಕೆ ಸಲ್ಲಿಸುವುದು.

ಅಧ್ಯಯನ ಕೇಂದ್ರದ ಮಾನ್ಯತೆಗಾಗಿ ನೋಂದಣಿ ಶುಲ್ಕ 5000/–ರೂಗಳು ಹಾಗೂ ವಾರ್ಷಿಕ ಶುಲ್ಕ 10000/–ರೂಗಳನ್ನು **'ಹಣಕಾಸು ಅಧಿಕಾರಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು'**–ಇವರ ಹೆಸರಿನಲ್ಲಿ ಡಿ.ಡಿ ತೆಗೆದು ವಿಶ್ವವಿದ್ಯಾಲಯಕ್ಕೆ ಆವೇದನಾ ಪತ್ರದೊಂದಿಗೆ ಸಲ್ಲಿಸುವುದು.

6-1-14

**ಕುಲಸಚಿವರು**

**ವಿಷಯ : ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಡಿಯಲ್ಲಿ ಜ್ಯೋತಿಷ್ಯ ಅಧ್ಯಯನ ಕೇಂದ್ರವನ್ನು ತೆರೆಯಲು ಸೂಚನೆಗಳು.**

**ಅಧ್ಯಯನ ಕೇಂದ್ರಗಳಿಗೆ ಸೂಚನೆಗಳು :**

1. ಅಧ್ಯಯನ ಕೇಂದ್ರಗಳಿಗೆ ಮಾನ್ಯತೆಯನ್ನು ನೀಡಲು ಸಮರ್ಪಕ ಬೋಧನಾಕೊಠಡಿಗಳು ಹಾಗೂ ಆಧುನಿಕ ಮೂಲಭೂತ ಸೌಕರ್ಯಗಳನ್ನು ಹೊಂದಿರಬೇಕು.
2. ಮಾನ್ಯತೆಯನ್ನು ಅಪೇಕ್ಷಿಸುವ ಸಂಸ್ಥೆಗಳು ನಿಗದಿತ ನಮೂನೆಯಲ್ಲಿ ಮಾನ್ಯತೆಗಾಗಿ ಅರ್ಜಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕು.
3. ತಪಾಸಣೆಯ ವೆಚ್ಚವನ್ನು ಸಂಪೂರ್ಣವಾಗಿ ಸಂಸ್ಥೆಯೇ ಭರಿಸಬೇಕು ಹಾಗೂ ವಿಶ್ವವಿದ್ಯಾಲಯವು ನಿಗದಿ ಪಡಿಸಿದ ಶುಲ್ಕವನ್ನು ಪಾವತಿಸಬೇಕು.
4. ಶಾಶ್ವತ ಮಾನ್ಯತೆಯನ್ನು ಪಡೆಯಲು ಸಂಸ್ಥೆಯು ಕನಿಷ್ಠ 5ವರ್ಷಗಳ ಕಾಲ ಬೋಧನೆಯನ್ನು ನಡೆಸಿರಬೇಕು.
5. ಅಧ್ಯಯನ ಕೇಂದ್ರವೆಂದು ಪರಿಗಣಿಸಲು ವಿಶ್ವವಿದ್ಯಾಲಯದ ಜ್ಯೋತಿಷ್ಯಶಿಕ್ಷಣದ ಪರಿನಿಯಮಗಳ ಪ್ರಕಾರ ಅರ್ಹ ಶಿಕ್ಷಕರನ್ನು ನೇಮಿಸಬೇಕು.
6. ಅಧ್ಯಯನ ಕೇಂದ್ರವನ್ನು ನಡೆಸುವ ಸಂಸ್ಥೆಯೇ ಬೋಧನೆಯ ಹಾಗೂ ಇತರ ವಿಷಯಗಳಿಗೆ ಜವಾಬ್ದಾರವಾಗಿರುತ್ತದೆ.

**ಉಪನ್ಯಾಸಕರ ಅರ್ಹತೆಗಳು :**

**1. ಜ್ಯೋತಿಷ್ಯದಲ್ಲಿ ಸರ್ಟಿಫಿಕೇಟ್ ಕೋರ್ಸ್‌ಗಾಗಿ :**

- ಯಾವುದೇ ವಿಷಯದಲ್ಲಿ ಸ್ನಾತಕ ಪದವಿಯನ್ನು ಪಡೆದಿದ್ದು ಜ್ಯೋತಿಷ್ಯ ಡಿಪ್ಲೋಮಾ ಮಾಡಿರಬೇಕು ಅಥವಾ ಜ್ಯೋತಿಷ್ಯ ಯು.ಜಿ ಅಥವಾ ಪಿ.ಜಿ ಅಥವಾ ತತ್ಸಮಾನ ಡಿಗ್ರಿಯನ್ನು ಮಾನಿತ ವಿಶ್ವವಿದ್ಯಾಲಯದಲ್ಲಿ ಪಡೆದಿರಬೇಕು.

**2. ಜ್ಯೋತಿಷ್ಯ ಡಿಪ್ಲೋಮಾ ಕೋರ್ಸ್‌ಗಳಿಗಾಗಿ :**

- ಯಾವುದೇ ವಿಷಯದಲ್ಲಿ ಸ್ನಾತಕ ಪದವಿಯನ್ನು ಪಡೆದಿದ್ದು, ಮೂರು ವರ್ಷಗಳ ಸಹಾಯಕ ಪ್ರಾಧ್ಯಾಪಕ/ಪ್ರಾಧ್ಯಾಪಕರಾಗಿ ಸ್ನಾತಕ ಅಥವಾ ಸ್ನಾತಕೋತ್ತರ ಪದವಿಗಳಿಗೆ ಪಾಠಮಾಡಿದ ಅನುಭವವಿರಬೇಕು. ಹಾಗೂ ಜ್ಯೋತಿಷ್ಯದಲ್ಲಿ ಸರ್ಟಿಫಿಕೇಟ್‌ಕೋರ್ಸ್ ಅಥವಾ ಜ್ಯೋತಿಷ ಡಿಪ್ಲೋಮಾ ಅಥವಾ ಜ್ಯೋತಿಷ್ಯಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಮಾನ್ಯತೆ ಹೊಂದಿರುವ ವಿಶ್ವವಿದ್ಯಾಲಯದಲ್ಲಿ ಪಡೆದಿರಬೇಕು.

  **ಅಥವಾ**

  ಯಾವುದೇ ವಿಷಯದಲ್ಲಿ ಸ್ನಾತಕ ಅಥವಾ ಸ್ನಾತಕೋತ್ತರ ಪದವಿಯ ಜೊತೆಗೆ ಜ್ಯೋತಿಷ್ಯ ಸರ್ಟಿಫ್ಲಿಕೇಟ್ ಕೋರ್ಸ್ ಅಥವಾ ಜ್ಯೋತಿಷ್ಯ ಡಿಪ್ಲೋಮಾ ಅಥವಾ ತತ್ಸಮಾನ ಇನ್ನಿತರ ಪದವಿಯನ್ನು ಮಾನ್ಯತೆ ಹೊಂದಿದ ಸಂಸ್ಥೆಗಳಿಂದ ಪಡೆದಿರಬೇಕು.

  **ಅಥವಾ**

  ಯಾವುದೇ ವಿಷಯದಲ್ಲಿ ಪಿಎಚ್.ಡಿ/ಎಂಫಿಲ್‌ಪದವಿಯನ್ನು ಹೊಂದಿದ್ದು ಜೊತೆಗೆ ಜ್ಯೋತಿಷ್ಯ ಸರ್ಟಿಫ್ಲಿಕೇಟ್ ಕೋರ್ಸ್ ಅಥವಾ ಜ್ಯೋತಿಷ್ಯ ಡಿಪ್ಲೋಮಾ ಅಥವಾ ತತ್ಸಮಾನ ಇನ್ನಿತರ ಪದವಿಯನ್ನು ಮಾನ್ಯತೆ ಹೊಂದಿದ ಸಂಸ್ಥೆಗಳಿಂದ ಪಡೆದಿರಬೇಕು.

**ಅಥವಾ**

ಪ್ರಸಿದ್ಧ ಜ್ಯೋತಿಷಿಗಳಾಗಿ ಹತ್ತುವರ್ಷಗಳ ಕಾಲ ಅನುಭವವನ್ನು ಹೊಂದಿದ್ದು, ಜ್ಯೋತಿಷ್ಯ ಸರ್ಟಿಫಿಕೇಟ್ ಕೋರ್ಸ್ ಅಥವಾ ಜ್ಯೋತಿಷ ಡಿಪ್ಲೋಮಾ ಅಥವಾ ತತ್ಸಮಾನ ಇನ್ನಿತರ ಪದವಿಯನ್ನು ಮಾನ್ಯತೆ ಹೊಂದಿದ ಸಂಸ್ಥೆಗಳಿಂದ ಪಡೆದಿರಬೇಕು.

**ಅಥವಾ**

ಯೋಗ್ಯ ಜ್ಯೋತಿಷಿಗಳಾಗಿದ್ದು, ಜ್ಯೋತಿಷ್ಯ ಶಾಸ್ತ್ರದಲ್ಲಿ ನೈಪುಣ್ಯವನ್ನು ಹೊಂದಿದ್ದು, ಜ್ಯೋತಿಷ್ಯ ಕ್ಷೇತ್ರದಲ್ಲಿ ಕೆಲಸ ಮಾಡುತ್ತಾ, ಜ್ಯೋತಿಷ್ಯ ಶಾಸ್ತ್ರದ ಬಗ್ಗೆ ದೇಶ ಹಾಗೂ ವಿದೇಶಗಳ ಪ್ರಸಿದ್ಧ ಶೋಧಪತ್ರಿಕೆಗಳಲ್ಲಿ ಶೋಧಪತ್ರಿಕೆಗಳನ್ನು ಪ್ರಕಟಿಸಿರಬೇಕು. ಅಥವಾ ಶೋಧಗ್ರಂಥಗಳನ್ನು ಪ್ರಕಟಿಸಿರಬೇಕು.

**ಕೋರ್ಸ್‌ನ ನಿಯಮಗಳು**

- ಶೈಕ್ಷಣಿಕ ವರ್ಷವು ಮೇ/ಜೂನ್‌ಗಳಲ್ಲಿ ಆರಂಭವಾಗಿ ಫೆಬ್ರುವರಿ/ಮಾರ್ಚ್ ತಿಂಗಳಲ್ಲಿ ಮುಕ್ತಾಯಗೊಳ್ಳುವುದು. ತರಗತಿಗಳು ಶನಿವಾರ ಹಾಗೂ ಭಾನುವಾರಗಳಲ್ಲಿ ಮಧ್ಯಾಹ್ನ 3.00ಗಂಟೆಯಿಂದ ಸಂಜೆ 6.00ರವರೆಗೆ ನಡೆಯುವುದು. ಅಂತಿಮ ಪರೀಕ್ಷೆಯನ್ನು ಜೂನ್/ಡಿಸೆಂಬರ್ ಮಾಹೆಯಲ್ಲಿ ನಡೆಸುವುದು. ಕೋರ್ಸ್‌ಗೆ ಸಂಬಂಧಿಸಿದ ನಿಯಮಗಳನ್ನು ವಿಶ್ವವಿದ್ಯಾಲಯದಿಂದ ಮಾನ್ಯತೆ ಹೊಂದಿದ ಅಧ್ಯಯನ ಕೇಂದ್ರಗಳಿಂದ ನೀಡಲಾಗುವುದು.
- ಸರ್ಟಿಫಿಕೇಟ್ ಕೋರ್ಸ್ ಹಾಗೂ ಡಿಪ್ಲೋಮಾ ಕೋರ್ಸ್‌ಗಳ ಪರೀಕ್ಷೆಗಳು ಮುಗಿದ ನಂತರ ತೇರ್ಗಡೆ ಹೊಂದಲು ವಿದ್ಯಾರ್ಥಿಯು ಕನಿಷ್ಠ 35% ಅಂಕಗಳನ್ನು ವಿಷಯದಲ್ಲಿ ಪಡೆದಿರಬೇಕು. ಕನಿಷ್ಠ50% ಅಂಕಗಳನ್ನು ಪಡೆದವನು ದ್ವಿತೀಯದರ್ಜೆಯಲ್ಲಿ, 60%ಕ್ಕಿಂತ ಹೆಚ್ಚಿನ ಅಂಕಗಳನ್ನು ಪಡೆದವನು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯನ್ನು ಹೊಂದುತ್ತಾನೆ.

**ಇತರ ಸೂಚನೆಗಳು :**

- ಪ್ರತಿ ಸಂಸ್ಥೆಗೆ ಹಾಗೂ ಪ್ರತಿ ತರಗತಿಗಳಿಗೆ ಅಭ್ಯರ್ಥಿಗಳ ಪ್ರವೇಶವನ್ನು ನಿರ್ದಿಷ್ಟ ಸ್ಥಾನಗಳಿಗೆ ನಿರ್ಬಂಧಿಸುವುದು.
- ಅಭ್ಯರ್ಥಿಗಳು ಒದಗಿಸುವ ವಯಸ್ಸು/ಅರ್ಹತೆ ಇತ್ಯಾದಿ ದಾಖಲೆಗಳಲ್ಲಿ ತಪ್ಪಿದ್ದಲ್ಲಿ ಸರ್ಟಿಫಿಕೇಟ್ ಕೋರ್ಸ್ ಅಥವಾ ಡಿಪ್ಲೋಮಾ ಕೋರ್ಸ್‌ಗೆ ನೀಡಿದ ಪ್ರವೇಶವನ್ನು ಹಿಂಪಡೆಯುವುದು.
- ಅಭ್ಯರ್ಥಿಗಳ ಪ್ರವೇಶದಲ್ಲಿ ಆಯ್ಕೆ ಅಥವಾ ತಿರಸ್ಕಾರವನ್ನು ಕುರಿತು ಅಂತಿಮ ನಿರ್ಧಾರವನ್ನು ಕೈಗೊಳ್ಳುವುದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಮಿತಿಯದಾಗಿರುತ್ತದೆ.
- ಅಭ್ಯರ್ಥಿಗಳ ಆಯ್ಕೆ ಅಥವಾ ತಿರಸ್ಕಾರದ ಸಂಬಂಧ ಪತ್ರವ್ಯವಹಾರವನ್ನು ನಡೆಸಲು ವಿಶ್ವವಿದ್ಯಾಲಯವು ಅನುಮತಿಯನ್ನು ನೀಡುವುದಿಲ್ಲ.
- ಕೋರ್ಸ್ ಸಂಬಂಧ ಪಾವತಿಸಿದ ಶುಲ್ಕದಲ್ಲಿ ಯಾವುದೇ ರೀತಿಯ ರಿಯಾಯಿತಿ ಇರುವುದಿಲ್ಲ ಹಾಗೂ ಒಮ್ಮೆ ಪಾವತಿಸಿದ ಶುಲ್ಕವನ್ನು ಮರುಪಾವತಿಸುವುದಿಲ್ಲ.
- ವಿದ್ಯಾರ್ಥಿಗಳಿಗೆ ಐಡೆಂಟಿಟಿ ಕಾರ್ಡನ್ನು ನೀಡಲಾಗುವುದು. ಇದನ್ನು ಕೋರ್ಸ್ ಮುಗಿಯುವವರೆಗೂ ಸಂರಕ್ಷಿಸಿಕೊಳ್ಳಬೇಕು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ತಪಾಸಣೆ ನಡೆಸುವ ಸಂದರ್ಭದಲ್ಲಿ ಅದನ್ನು ಒದಗಿಸಬೇಕು.
- ವಿದ್ಯಾರ್ಥಿಗಳು ಪ್ರವೇಶ ಪಡೆದ ಕೋರ್ಸ್‌ನ ಹೊರತಾಗಿ ಬೇರೆ ಹಕ್ಕುಗಳನ್ನು ಚಲಾಯಿಸುವಂತಿಲ್ಲ.
- ಪ್ರವೇಶ ಪಡೆದ ವಿದ್ಯಾರ್ಥಿಗಳು ತರಗತಿಗಳಲ್ಲಿ ಶಿಸ್ತನ್ನು ಕಾಪಾಡಬೇಕು ಹಾಗೂ ದಿನಚರಿ ಪುಸ್ತಕವನ್ನು ನಿರ್ವಹಿಸಬೇಕು.

**ಕುಲಸಚಿವರು** 6-1-14